**ಅಸಲು ದಾವಾ ನಂಃ 40/2017**
**ಪಿ.ಡಬ್ಲ್ಯೂಃ 1,**

**<u>ದಿನಾಂಕ :04-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲು :- ಶ್ರೀ.ಜಿ.ಜಿ.ಕೆ. ಪ್ರತಿವಾದಿ ಪರ ವಕೀಲರಿಂದ :</u>**

ದಾವಾ ಸ.ನ. 35 ಇದೆ, ಅದು 18 ಎಕರೆ 10 ಗುಂಟೆ ಇದೆ. ದಾವಾ ಆಸ್ತಿ ಪಹಣಿ ಮೊದಲು ನಮ್ಮ ಮುತ್ತಜ್ಜ ಹೆಸರಿನಲ್ಲಿ, ಅಜ್ಜ ಮತ್ತು ನನ್ನ ತಂದೆ ಹೆಸೆರಿನಲ್ಲಿದ್ದು , ಕಳೆದ 50 ವರ್ಷಗಳಿಂದ ಪಹಣಿ ನಮ್ಮ ಹೆಸರಿನಲ್ಲಿ ಇದ್ದ ಕಾರಣ ಅದು ನಮ್ಮ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಜಮೀನು ಮೇಲೆ ನಾವು 5 ಲಕ್ಷ ಸಾಲ ಪಡೆದಿಲ್ಲಾ. ದಾವಾ ಆಸ್ತಿ ಮೇಲೆ ಮೈನಾರಟಿ ಡೆವಲಮೆಂಟ್ ಕಾರ್ಪೊರೇಶನ ಬೆಂಗಳೂರು ಇವರ ಕಡೆಯಿಂದ 8 ಲಕ್ಷ ಪಡೆಯಲಾಗಿದೆ ಎಂದರೆ ಸಾಕ್ಷಿ ನಾನು ಪಡೆದಿಲ್ಲಾ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಮೇಲೆ 5 ಲಕ್ಷ, 8 ಲಕ್ಷ ಬೋಜಾ ಇದ್ದು ಅದನ್ನು ನಾನು ಗಮನಿಸಿಲ್ಲಾ , ಕ್ರಮ ಕೈಗೊಂಡಿಲ್ಲಾ. ನಾನು ದಾವಾ ಜಮೀನಿನ ಪಹಣಿ ನೊಡಲಾರದೆ 4-5 ವರ್ಷ ಆಗಿರಬಹುದು. ಗೋಪಾಲ ತಂದೆ ಹರಿಶ್ಚಂದ್ರ ನನಗೆ ಪರಿಚಯ ಇಲ್ಲಾ. ದಾವಾ ಪಹಣಿಯಲ್ಲಿ ಗೋಪಾಲ ತಂದೆ ಹರಿಶ್ಚಂದ್ರ ಇವರ ಹೆಸರು ಇದ್ದ ಬಗ್ಗೆ ನಾನು ಗಮನಿಸಿಲ್ಲಾ. ದಾವಾ ಆಸ್ತಿಯ ಪಹಣಿಯಲ್ಲಿ ಪಟ್ಟಾ ಕಾಲಂ ನಲ್ಲಿ ಗೋಪಾಲ ತಂದೆ ಹರಿಶ್ಚಂದ್ರ ಇವರಿಗೆ 1 ಎಕರೆ 20 ಗುಂಟೆ ಇವರ ಹೆಸರಿಗೆ ಇದ್ದ ಬಗ್ಗೆ ನಾನು ಗಮನಿಸಿಲ್ಲಾ ಮತ್ತು ಕ್ರಮ ಕೈಗೊಂಡಿಲ್ಲಾ. ದಾವಾ ಜಮೀನು 18 ಎಕರೆ 10 ಗುಂಟೆ ಪೈಕಿ 9 ಎಕರೆ 05 ಗುಂಟೆ ನಮ್ಮ ತಾತ ಅಬ್ದುಲ ರಹೆಮಾನ ಹೆಸರಿಗೆ ಮತ್ತು ಬೋಜನ ಹೆಸರಿಗೆ ಹಿಸ್ಸ ಫೋಡಿ ಆಗಿ ಫಾರಂ-10 ಆಗಿಲ್ಲಾ. ನಾನು ದಾವಾ ಜಮೀನಿನ ಮೇಲೆ ಪಿ.ಕೆ.ಪಿ.ಎಸ್. ಮತ್ತು ಪಿ.ಎಲ್.ಡಿ. ಮತ್ತು ಡಿ.ಸಿ.ಸಿ. ಬ್ಯಾಂಕ ವತಿಯಿಂದ ದಾವಾ ಜಮೀನಿನ ಮೇಲೆ ಯಾವುದೇ ಸಾಲ ಪಡೆದಿಲ್ಲಾ.

**ಅಸಲು ದಾವಾ ನಂಃ 40/2017**
**ಪಿ.ಡಬ್ಲ್ಯೂಃ 1,**

ಗೋಪಾಲ ಇವರ ತಂದೆ ಹರಿಶ್ಚಂದ್ರ ಇವರ ಪರಿಚಯ ಇವರ ಪರಿಚಯ ಇಲ್ಲಾ. ಸ.ನ.35ರ 18 ಎಕರೆ 10 ಗುಂಟೆಯಲ್ಲಿ ನಮ್ಮ 9 ಎಕರೆ 05 ಗುಂಟೆ ಪೂರ್ವ ದಿಕ್ಕಿಗೆ ಇದೆ. 9 ಎಕರೆ 05 ಗುಂಟೆಯ ಪೂರ್ವಕ್ಕೆ : ಸಿದ್ರಾಮ ತಂದೆ ಭೀಮರಾವ ಇವರ ಜಮೀನು, ಪಶ್ಚಿಮಕ್ಕೆ : ಡಾ: ಶಾಂತರಾಜ ಇವರ ಜಮೀನು, ಉತ್ತರಕ್ಕೆ : ಇಬ್ರಾಹಿಂಸಾಬ ಜಮೀನು ಇದೆ, ದಕ್ಷಿಣಕ್ಕೆ : ಡಾ: ಶಾಂತರಾಜ ಇವರ ಜಮೀನು. ಪಶ್ಚಿಮ ಮತ್ತು ದಕ್ಷಿಣಕ್ಕೆ ಜಮೀನು ಇರುವ ಡಾ: ಶಾಂತರಾಜ ಇವರು 1ನೇ ಪ್ರತಿವಾದಿಯ ತಂದೆ ಮತ್ತು 2ನೇ ಪ್ರತಿವಾದಿಯ ಗಂಡ ಎಂದರೆ ಸರಿ. 2ನೇ ಪ್ರತಿವಾದಿಯು ದಾವಾ ಸ.ನ. 35 ರಲ್ಲಿ 18 ಎ 10 ಗು ಪೈಕಿ 9ಎ 5 ಗು ಜಮೀನು ಬೋಜ್ಯಾ ಇವರ ಕಡೆಯಿಂದ ಖರಿದಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲಾ. ಪಶ್ಚಿಮ ಮತ್ತು ದಕ್ಷಿಣಕ್ಕೆ ಜಮೀನು ಇರುವ ಡಾ: ಶಾಂತರಾಜ ಇವರ ಜಮೀನು ಇವರ ಹಿರಿಯರ ಆಸ್ತಿ ಅಥವಾ ಖರಿದಿ ಮಾಡಿದ ಆಸ್ತಿಯು ನನಗೆ ಗೊತ್ತಿಲ್ಲಾ.

**( ಈ ಹಂತದಲ್ಲಿ ಹೆಚ್ಚಿನ ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು, ಪಾಟಿ ಸವಾಲು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**